ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 48/2023

| | |
|---|---|
| ಪ್ರಾಸಾ | 10 |
| ಚಾಸಾ | 03 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ವಿಶೇಷ ಅಪರಾಧಿಕ ಪ್ರಕರಣ ಸಂಖ್ಯೆ: 48/2023**

**ದಿನಾಂಕ: 06.05.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿ.ಮುದ್ದುಕೃಷ್ಣ |
| ತಂದೆಯ ಹೆಸರು | : | ಕೆ.ವೆಂಕಟರಮಣಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಪತ್ರಕರ್ತರು |
| ವಾಸಸ್ಥಳ | : | ವರ್ಲಕೊಂಡ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಪ್ರಾಸಾ-7 ಮತ್ತು ಪ್ರಾಸಾ-9 ನನ್ನ ತಂಗಿಯರು. ಚಾಸಾ-4 ರಿಂದ ಚಾಸಾ-8 ರವರ ಪರಿಚಯವಿದೆ. ನಾವು ನಾಯಕ ಜಾತಿಗೆ ಸೇರಿರುತ್ತೇವೆ.

2. ನಮ್ಮ ತಂದೆ-ತಾಯಿಗೆ ನಾವು 5 ಜನ ಮಕ್ಕಳು. ವರ್ಲಕೊಂಡ ಗ್ರಾಮದಲ್ಲಿ ನಮ್ಮ ತಾಯಿಯ ಹೆಸರಿನಲ್ಲಿ ಸರ್ವೇ ನಂಬರ್ 17/3 ರಲ್ಲಿ 3 ಎಕರೆ 20 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನು ಚಂದ್ರಕಲಾ, ಪದ್ಮ ಮತ್ತು ಅನಿತಾರವರ

| | |
|---|---|
| ಪ್ರಾಸಾ | 10 |
| ಚಾಸಾ | 03 |

ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ. ದಿನಾಂಕ 04.09.2023 ರಂದು ಸುಮಾರು ಬೆಳಿಗ್ಗೆ 11.00-12.00 ಗಂಟೆಯ ಸಮಯದಲ್ಲಿ ಲಕ್ಷ್ಮೀನಾರಾಯಣಪ್ಪ, ಪ್ರಭಾಕರ್, ಮುನಿರಾಜು, ವೆಂಕಟಲಕ್ಷ್ಮಮ್ಮ, ಗಾಯಿತ್ರಿ ಮತ್ತು ಚಂದ್ರಿಕಲಾ, ಪದ್ಮ ಮತ್ತು ಅನಿತಾರವರ ನಡುವೆ ಗಲಾಟೆ ಆಗಿರುತ್ತದೆ. ಸದರಿ ಸಮಯ ಆರೋಪಿತರು ಅವಾಚ್ಯ ಶಬ್ದಗಳಿಂದ ಜಾತಿ ನಿಂದನೆ ಮಾಡಿ, ಬೈದಿರುತ್ತಾರೆ. ಸದರಿ ಸಮಯ ನಾನು ಸ್ಥಳದಲ್ಲೇ ಇದ್ದೆ. ಆರೋಪಿತರು ತೆಲುಗು ಭಾಷೆಯಲ್ಲಿ ಸಣ್ಣ ಜಾತಿ ಹೊಳ್ಳು, ಸಣ್ಣ ಬುದ್ದಿ ಇಡಿಸೇ ಲೇದು, ಗಲೀಜು ಮುಂಡ್ಲು, ಬೇವರ್ಸಿ ಮುಂಡ್ಲು, ಮೂಡು ಇಡಿಸಿಂಡ್ಲೆ ಮುಂಡ್ಲು ಹಾಗೂ ಮಿಮ್ಮಲ್ಲಿ ನರಿಕೇಸ್ತಾಮು ಎಂದು ಬೆದರಿಕೆ ಹಾಕಿ, ಈ ಜಮೀನು ಮಾದಿ, ಮಾ ತಂಟಿಕಿ ವಸ್ತೇ ಇಡಿಸೇ ಲೇದು, ಮುಗಿಸೇಸ್ತಾಮು ಎಂದು ಬೈದಿರುತ್ತಾರೆ. ಮಾ ಜಾತಿ, ಮೇಲ್ ಜಾತಿ, ಮಾ ತಂಟಿಕಿ ವಚ್ಚೇಕಿ ಎಂತ ಧೈರ್ಯಮು ಎಂದು ಬೈದಿರುತ್ತಾರೆ. ಗಲಾಟೆಗೆ ಕಾರಣ  ಹೊಲದಲ್ಲಿ ಕುರಿಗಳನ್ನು ಬಿಟ್ಟ ವಿಚಾರಕ್ಕೆ ಗಲಾಟೆ ಆಗಿರುತ್ತದೆ. ಗಲಾಟೆಯನ್ನು ನಾನು, ಶ್ರೀನಿವಾಸ್, ಚೌಡಪ್ಪ, ಸುಹಾಸ್ ರವರು ಬಿಡಿಸಿರುತ್ತೇವೆ. ಅದಕ್ಕಿಂತ ಪೂರ್ವದಲ್ಲಿ ಗಲಾಟೆ ಆಗಿರುವುದನ್ನು ನಾನು ನೋಡಿರುವುದಿಲ್ಲ. ಇದೇ ಮೊದಲ ಬಾರಿಗೆ ಗಲಾಟೆಯನ್ನು ನೋಡಿರುತ್ತೇನೆ. ಆ ಬಗ್ಗೆ ನನ್ನನ್ನು ಪೊಲೀಸರು ವಿಚಾರಣೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ 2,4,5,6 ನೇ ಆರೋಪಿತರು

| | |
|---|---|
| ಪ್ರಾಸಾ | 10 |
| ಚಾಸಾ | 03 |

ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 2,4,5,6 ನೇಆರೋಪಿತರ ಪರ ಶ್ರೀ ಎಸ್ ಕೆ ಎಂ ವಕೀಲರಿಂದಃ**

3. ನಾನು ಐದು ವರ್ಷಗಳಿಂದ ಪತ್ರಕರ್ತನಾಗಿ ಕೆಲಸ ಮಾಡುತ್ತಿದ್ದೇನೆ. ಅದರೊಂದಿಗೆ ನಾನು ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು 2023 ರಲ್ಲಿ ಎನ್ ರೋಲ್ ಆಗಿ 2025 ರಿಂದ ವಕೀಲ ವೃತ್ತಿ ಮಾಡುತ್ತಿರುತ್ತೇನೆ. ನಾನು 2017 ರಲ್ಲಿ LLB ಗೆ ಸೇರಿರುತ್ತೇನೆ. ನನ್ನ ತಾಯಿಯ ಹೆಸರು ರತ್ನಮ್ಮ.ಬಿ. ನನ್ನ ಹೇಳಿಕೆಯಲ್ಲಿ ನನ್ನ ತಾಯಿಯ ಹೆಸರು ಗೌರಮ್ಮ ಎಂದು ಹೇಳಿರುವುದಿಲ್ಲ. ನಾನು ರತ್ನಮ್ಮ ಎಂದು ಹೇಳಿರುತ್ತೇನೆ. ಸದರಿ ಸಾಕ್ಷಿಯು ನಿರಾಕರಿಸಿದ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು. ಚಾಸಾ-1, 2 ಮತ್ತು 4 ಹಾಗೂ 5 ರವರು ನನ್ನ ಅಕ್ಕ-ತಂಗಿಯರು ಮತ್ತು ಅಣ್ಣಂದಿರು ಎಂದರೆ ಸರಿ. ಸಾಕ್ಷಿಗೆ ಗಲಾಟೆ ನಡೆದಿದೆ ಎಂದು ಹೇಳಲಾದ ದಿನಾಂಕ ಯಾವುದು ಎಂದು ಕೇಳಿದ್ದಕ್ಕೆ ಸಾಕ್ಷಿ ದಿನಾಂಕ 04.09.2023 ಎಂದು ಹೇಳುತ್ತಾರೆ. ಅದೇ ದಿನ ಸಂಜೆ ದೂರನ್ನು ನೀಡಿರುತ್ತೇವೆ. ಸಿವಿಲ್ ದಾವೆ ಇರುವುದರಿಂದ ಸುಳ್ಳು ದೂರನ್ನು ನೀಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಕುರಿಗಳನ್ನು ಬಿಟ್ಟ ವಿಚಾರದಲ್ಲಿ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 17/3 ಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯ ಬಾಕಿ ಇದೆ ಎಂದರೆ ಸರಿ. ಸರ್ವೇ ನಂಬರ್

| | |
|---|---|
| ಪ್ರಾಸಾ | 10 |
| ಚಾಸಾ | 03 |

17/3 ರ ಪಕ್ಕದಲ್ಲಿ ಆರೋಪಿಗೆ ಸಂಬಂಧಿಸಿದ ಸರ್ವೇ ನಂಬರ್ 26/7 ರಂತೆ 5 ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ಕಡೆ ದೂರದಲ್ಲಿದೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 26/7 ರಲ್ಲಿ ಮನೆ ಮತ್ತು ಕುರಿ ಶೆಡ್ ನ್ನು ಆರೋಪಿತರು ನಿರ್ಮಾಣ ಮಾಡಿಕೊಂಡಿದ್ದು, ಅದು ದೂರುದಾರರ ಜಮೀನಿಗೆ ಒತ್ತುವರಿ ಆಗಿದೆ ಎಂದು ನಾವು ಸಿವಿಲ್ ವ್ಯಾಜ್ಯ ಹೂಡಿದ್ದೇವೆ ಎಂದರೆ ಸಾಕ್ಷಿಯು ನಾವು ಸಿವಿಲ್ ವ್ಯಾಜ್ಯ ಹೂಡಿದ್ದೇವೆ ಆದರೆ ಮನೆ ಚಂದ್ರಕಲಾರವರದ್ದು ಎಂದು ನುಡಿಯುತ್ತಾರೆ. ಸರ್ವೇ ನಂಬರ್ 26/7 ರಲ್ಲಿ ಆರೋಪಿತರು ಮನೆ ಕಟ್ಟಿಕೊಂಡು 15-20 ವರ್ಷಗಳಾಗಿವೆ ಎಂದರೆ ಸರಿಯಲ್ಲ. ಆರೋಪಿತರು ಮನೆ ಕಟ್ಟುವಾಗ ನಮ್ಮ ತಂದೆಯೇ ನಿಂತು ಅಡಿಪಾಯ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 04.09.2023 ರಂದು ಗಲಾಟೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ "ದಿನಾಂಕ 04.09.2023 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನನ್ನ ಅಕ್ಕ ಚಂದ್ರಕಲಾರವರು ನನಗೆ ಕರೆ ಮಾಡಿ ವಿಚಾರ ತಿಳಿಸಿದ್ದೇನೆಂದರೆ" ಎಂದು ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-2(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ "ನಂತರ ನಾನು

| | |
|---|---|
| ಪ್ರಾಸಾ | 10 |
| ಚಾಸಾ | 03 |

ನನ್ನ ಅಕ್ಕನಿಗೆ ನೀನು ವಾಪಸ್ಸು ಬಾ, ತಹಶೀಲ್ದಾರ್ ರವರಿಗೆ ದೂರು ಕೊಟ್ಟು ಅಳತೆ ಮಾಡಿಸಿ, ನಂತರ ದೂರು ಕೊಡೋಣವೆಂದು ತಿಳಿಸಿ ಕರೆಯಿಸಿಕೊಂಡೆನು" ಎಂದು ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಡಿ-2(ಬಿ) ಎಂದು ಗುರುತಿಸಲಾಯಿತು. ಸರ್ವೇ ನಂಬರ್ 17/3 ಮತ್ತು ಸರ್ವೇ ನಂಬರ್ 24 ರ ಅಂತರ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 100 ಮೀಟರ್ ಇರಬಹುದು ಎಂದು ನುಡಿಯುತ್ತಾರೆ. 2 ರಿಂದ 5 ನೇ ಆರೋಪಿತರು ದಿನಾಂಕ 04.09.2023 ರಂದು ಬೆಳಿಗ್ಗೆ 11.00-12.00 ಗಂಟೆ ಮಧ್ಯೆ ಊರಿನಲ್ಲಿ ಇರಲಿಲ್ಲ, ಕೂಲಿ ಕೆಲಸಕ್ಕೆ ಮತ್ತು ಕುರಿ ಮೇಯಿಸಲು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯ 1 ನೇ ಆರೋಪಿ ಬೆಡ್ ರೆಸ್ಟ್ ನಲ್ಲಿ ಇದ್ದು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 3 ನೇ ಆರೋಪಿಯು ಸಹ ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಜಾತಿ ನಿಂದನೆ ಮಾಡಿಲ್ಲ ಹಾಗೂ ಮಾನನಷ್ಟ ಆಗುವ ರೀತಿಯಲ್ಲಿ ಯಾವುದೇ ಮಾತುಗಳನ್ನು ಆಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು 2017 ರಲ್ಲಿ LLB ಸೇರಿರುವುದರಿಂದ SC/ST POA Act ನ ಬಗ್ಗೆ ಮಾಹಿತಿ ಇರುವುದರಿಂದ ಉದ್ದೇಶಪೂರ್ವಕವಾಗಿ ಆರೋಪಿತರ ವಿರುದ್ಧ ಪ್ರಕರಣ

| | |
|---|---|
| ಪ್ರಾಸಾ | 10 |
| ಚಾಸಾ | 03 |

ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಿವಿಲ್ ಪ್ರಕರಣ ಮಾನ್ಯ ಗುಡಿಬಂಡೆ ನ್ಯಾಯಾಲಯದಲ್ಲಿ OS No.1/2020 ರಂತೆ ನಡೆಯುತ್ತಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಬೆದರಿಕೆ ಹಾಕಿ, ಆರೋಪಿತರು ರಾಜೀ ಮಾಡಿಕೊಳ್ಳದೇ ಇರುವ ಕಾರಣ ಉದ್ದೇಶಪೂರ್ವಕವಾಗಿ ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಗಲಾಟೆ ನಡೆದಿದೆ ಎಂದು ಹೇಳಲಾದ ಸಮಯದಲ್ಲಿ ಇಲ್ಲದೇ ಇದ್ದರೂ ದೂರುದಾರರು ನನ್ನ ತಂಗಿ ಆಗಿರುವ ಕಾರಣ ಆಕೆಗೆ ಸಹಾಯ ಮಾಡುವ ಕಾರಣದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

**(ದಿನಾಂಕ: 06.05.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

ಸಹಿ/-

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**